# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಇತರೆ ಉಪಚಾರಗಳು – ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ ಪುನರ್ವಿನಿಯೋಗದ ಮೂಲಕ ಪಡೆಯಲಾದ ಅನುದಾನವನ್ನು ಎರಡನೇ ಕಂತಿನ ಉಳಿಕೆ ಅನುದಾನವನ್ನಾಗಿ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ

1. ದಿನಾಂಕ: 19-06-2018 ರಂದು ನಡೆದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ರಾಜ್ಯ ಮಟ್ಟದ ಸಮಿತಿ ಸಭೆಯ ನಡವಳಿ.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 17-2/2018- RFS-III, ದಿನಾಂಕ: 10-04-2018.
3. ಸರ್ಕಾರದ ಆದೇಶ ಸಂಖ್ಯೆ: ಕೃಇ 77 ಕೃಕೈಲು 2018, ದಿನಾಂಕ: 18.08.2018.
4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 18-10/2018-RFS-III, ದಿನಾಂಕ: 28-12-2018.
5. ಜಲಾನಯನ ಅಭಿವೃದ್ಧಿ ಆಯುಕ್ತರ ಪತ್ರ ಸಂ: ಜಲಅಇ/ಉಕೃನಿ/ಕೃಅ2/ PMKSY-WD/ರಾಪಾ-ಅಬಿ/21/18-19, ದಿ:31-12-2018.
6. ಆರ್ಥಿಕ ಇಲಾಖೆ ಜಮಾ ಧೃಡೀಕರಣ ಪತ್ರ ಸಂಖ್ಯೆ: FD 01 BGL 2018, ದಿನಾಂಕ: 02-01-2019.
7. ಸರ್ಕಾರದ ಆದೇಶ ಸಂಖ್ಯೆ: ಕೃಇ 77 ಕೃಕೈಲು 2018, ದಿನಾಂಕ: 01-02-2019.
8. ಜಲಾನಯನ ಅಭಿವೃದ್ಧಿ ಆಯುಕ್ತರ ಪತ್ರ ಸಂ: ಜಲಇ/ಉಕೃನಿ/ಜಕೋ/ಕೃಅ2/ PMKSY-WDC/ಕೇರಾಪಾಅಬಿ/21/18-19, ದಿ:02-03-2019.
9. ಸರ್ಕಾರದ ಆದೇಶ ಸಂಖ್ಯೆ: FD 219 BRS 2018, ದಿನಾಂಕ: 20-03-2019.

ಪ್ರಸ್ತಾವನೆ:

2018-19ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಲೆಕ್ಕ ಶೀರ್ಷಿಕೆ: 2402-00-102-0-30 ರಡಿ ಒಟ್ಟು ರೂ. 32750.00 ಲಕ್ಷ ಅನುದಾನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

| ಕ್ರಸಂ | ಉಪ ಶೀರ್ಷಿಕೆ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | 139 | 26928.00 |
| 2. | 422 | 3824.00 |
| 3. | 423 | 1998.00 |
| | ಒಟ್ಟು | **32750.00** |

ಮೇಲೆ ಓದಲಾದ (1)ರ ದಿನಾಂಕ: 19-06-2018 ರಂದು ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುತ್ತಾ 2018-19ನೇ ಸಾಲಿಗೆ ರೂ. 142.7551 ಕೋಟಿ ಅನುದಾನದ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ.

ಮೇಲೆ ಓದಲಾದ (2)ರ ಕೇಂದ್ರ ಸರ್ಕಾರದ ಪತ್ರ ದಿನಾಂಕ: 10-04-2018ರಲ್ಲಿ ಒಟ್ಟು ರೂ. 80.00 ಕೋಟಿ ಕೇಂದ್ರ ಸರ್ಕಾರದ ಅನುದಾನವನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಇತರೆ ಉಪಚಾರಗಳು – ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ ತಾತ್ಕಾಲಿಕವಾಗಿ ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ, 2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2402-00-102-0-30 (ಯೋಜನೆ) ಅಡಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಇತರೆ ಉಪಚಾರಗಳು – ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮದ ಅನುಷ್ಠಾನಕ್ಕೆ **ರೂ.4766.67 ಲಕ್ಷ** ಅನುದಾನವನ್ನು ಬಿಡುಗಡೆ ಮಾಡುತ್ತಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (4)ರ ಕೇಂದ್ರ ಸರ್ಕಾರದ ಪತ್ರ ದಿನಾಂಕ: 28-12-2018ರಲ್ಲಿ ಒಟ್ಟು ರೂ. 32.3681 ಕೋಟಿ ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆಗೊಳಿಸಿರುತ್ತದೆ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಸಂ | ವರ್ಗ | ಕೇಂದ್ರದ ಪಾಲು ಅನುದಾನ (ರೂ.ಕೋಟಿಗಳಲ್ಲಿ) |
|---|---|---|
| 1. | ಪ್ರಧಾನ ಕಾಮಗಾರಿಗಳು (139) | 24.2760 |
| 2. | ಪರಿಶಿಷ್ಟ ಜಾತಿ ಉಪ ಯೋಜನೆ (422) | 5.8263 |
| 3. | ಗಿರಿಜನ ಉಪ ಯೋಜನೆ (423) | 2.2658 |
| | **ಒಟ್ಟು ಮೊತ್ತ** | **32.3681** |

ಮೇಲೆ ಓದಲಾದ (5)ರ ಜಲಾನಯನ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ರೂ.3236.81 ಲಕ್ಷ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲಿನ ಅನುದಾನ (ಶೇ. 40ರಂತೆ) ರೂ. 2157.87 ಲಕ್ಷ ಸೇರಿದಂತೆ ಒಟ್ಟಾರೆ ರೂ. 5394.68 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಕೇಂದ್ರ ಸರ್ಕಾರದ ಅನುದಾನವು ರಾಜ್ಯಕ್ಕೆ ಜಮೆಯಾಗಿರುವ ಕುರಿತು ಮೇಲೆ ಓದಲಾದ ಕ್ರಮಾಂಕ (6)ರಲ್ಲಿ ಆರ್ಥಿಕ ಇಲಾಖೆಯು ಜಮಾ ಧೃಡೀಕರಣ ಪತ್ರದಲ್ಲಿ ಧೃಡೀಕರಿಸಿರುತ್ತದೆ.

ಮೇಲೆ ಓದಲಾದ (7)ರ ಸರ್ಕಾರದ ಆದೇಶದಲ್ಲಿ, 2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2402-00-102-0-30-139 (ಯೋಜನೆ) ಅಡಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಇತರೆ ಉಪಚಾರಗಳು – ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮದ ಅನುಷ್ಠಾನಕ್ಕೆ ಲಭ್ಯವಿದ್ದ ಅನುದಾನದಲ್ಲಿ ರೂ.4046.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದೆ.

ಮೇಲೆ ಓದಲಾದ (8)ರ ಜಲಾನಯನ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ 2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2402-00-102-0-30-139ರಡಿ ಲಭ್ಯವಿರುವ ಒಟ್ಟು ರೂ. 6875.33 ಲಕ್ಷಗಳ ಅನುದಾನದಲ್ಲಿ ಮರು ಹೊಂದಾಣಿಕೆ ಮಾಡಿ ಪರಿಶಿಷ್ಟ ಜಾತಿ ಉಪ ಯೋಜನೆ (422) ರಡಿ ರೂ. 971.05 ಲಕ್ಷಗಳು ಹಾಗೂ ಗಿರಿಜನ ಉಪಯೋಜನೆ (423)ರಡಿ ರೂ. 377.63 ಲಕ್ಷಗಳನ್ನು ಸೇರಿಸಿ ಒಟ್ಟು ರೂ. 1348.68 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಮೇಲೆ ಓದಲಾದ (9)ರ ಸರ್ಕಾರದ ಆದೇಶದಲ್ಲಿ, ಆರ್ಥಿಕ ಇಲಾಖೆಯು 2018-19ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಓ.ಐ-ಪಿ.ಡಿ.ಎಂ.ಸಿ) (PMKSY-OI PDMC) ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಕ್ಕೆ ರಾಜ್ಯದ ಪಾಲು ಸೇರಿಸಿ ಬಿಡುಗಡೆಗೆ ಕೊರತೆಯಾಗಿರುವ ಅನುದಾನ, ಲೆಕ್ಕ ಶೀರ್ಷಿಕೆ: 2402-00-102-0-30-422-ಪರಿಶಿಷ್ಟ ಜಾತಿ ಉಪ ಯೋಜನೆ ಅಡಿಯಲ್ಲಿ ರೂ. 971.05 ಲಕ್ಷಗಳು, 423-ಗಿರಿಜನ ಉಪ ಯೋಜನೆ ಅಡಿಯಲ್ಲಿ ರೂ. 377.33 ಲಕ್ಷಗಳು ಒಟ್ಟು ರೂ. 1348.38 ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಿ ಮಂಜೂರಾತಿ ನೀಡಿರುತ್ತದೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 77 ಕೃಕೈಲು 2018, ಬೆಂಗಳೂರು, ದಿನಾಂಕ: 22.03.2019.**

2018-19ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಇತರೆ ಉಪಚಾರಗಳು - ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನ ಸೇರಿಸಿ ಒಟ್ಟು ರೂ. 1348.38 ಲಕ್ಷ (ಒಂದು ಸಾವಿರದ ಮುನ್ನೂರ ನಲವತ್ತೆಂಟು ಲಕ್ಷದ ಮೂವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) 2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2402-00-102-0-30-139 ಅಡಿಯಿಂದ ಲೆಕ್ಕ ಶೀರ್ಷಿಕೆ: 2402-00-102-0-30ಲಕ್ಕೆ ಲಭ್ಯವಾದ ಅನುದಾನವನ್ನು ಈ ಕೆಳಕಂಡಂತೆ ಉಪ ಶೀರ್ಷಿಕೆವಾರು ಬಿಡುಗಡೆ ಮಾಡುತ್ತಾ ಅನುದಾನವನ್ನು ಮಾರ್ಗಸೂಚಿಯನ್ವಯ ಘಟಕವಾರು, ವರ್ಗವಾರು ನಿಗಧಿತ ಹಂಚಿಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

| ಕ್ರಸಂ | ವರ್ಗ | ಬಿಡುಗಡೆ ಮಾಡಲಾದ ಒಟ್ಟು ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | ಪರಿಶಿಷ್ಟ ಜಾತಿ ಉಪ ಯೋಜನೆ (422) | 971.05 |
| 2. | ಗಿರಿಜನ ಉಪ ಯೋಜನೆ (423) | 377.33 |
| | **ಒಟ್ಟು ಮೊತ್ತ** | **1348.38** |

ಮುಂದುವರೆದು, ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ: ಆಇ 73 ವೆಚ್ಚ-4/2019, ದಿನಾಂಕ: 19.01.2019 ರಲ್ಲಿ 422 ಮತ್ತು 423 ರಡಿ ಒಟ್ಟು ರೂ. 2500.00 ಲಕ್ಷಗಳನ್ನು ಅಧ್ಯರ್ಪಣೆ ಮಾಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಾರ್ಚ್ 15ನೇ ವರೆಗಿನ ಖಜಾನೆ ಅಂಕಿ ಅಂಶಗಳ ಪ್ರಕಾರ, ಅಧ್ಯರ್ಪಣಾ ಅನುದಾನ ಮೀರಿ ವೆಚ್ಚವಾಗಿರುವ ಕಾರಣದಿಂದ ಈ ವಿಷಯದ ಕುರಿತು ಮಹಾಲೇಖಪಾಲರ ಆಕ್ಷೇಪಣೆ ಆಗುವ ಸಂಭವವಿರುವುದರಿಂದ ಪುನರ್ವಿನಿಯೋಗ ಮಾಡಿ 422 ರಡಿ ರೂ. 971.05 ಲಕ್ಷ ಹಾಗೂ 423 ಅಡಿಯಲ್ಲಿನ ರೂ. 377.33 ಲಕ್ಷ ನೀಡಿರುವ ಪೈಕಿ 422 ರಡಿ ರೂ. 869.94 ಲಕ್ಷ ಮತ್ತು 423ರಡಿ ರೂ. 126.68 ಲಕ್ಷ ಸೇರಿ ಒಟ್ಟು ರೂ. 996.62 ಲಕ್ಷಗಳ ಅನುದಾನವನ್ನು ಮಾತ್ರ ವೆಚ್ಚ ಭರಿಸಲು ಸಹಮತಿ ನೀಡಿದೆ.

ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 284 ವೆಚ್ಚ-4/2019, ದಿ:21-03-2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
22/03/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಆಯುಕ್ತರು,/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ- 4&5), ಆರ್ಥಿಕ ಇಲಾಖೆ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
13. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.